# ಗೂಗಲ್: ಲೈವ್ ವಾಲ್‌ಪೇಪರ್!




**■ ಶಶಿಕುಮಾರ್ ಸಿ.**

ಇನ್‌ಬಿಲ್ಟ್ ಆಗಿ ಸೇರಿಸಿದ್ದ ಅಥವಾ ಜಾಹೀರಾತಿಗೆ ಸಂಬಂಧಿಸಿದ ಫೋಟೊಗಳನ್ನು ಮಾತ್ರವೇ ಇಷ್ಟು ದಿನ 'ಲೈವ್ ವಾಲ್ ಪೇಪರ್'ನಂತೆ ಬಳಸಬಹುದಾಗಿತ್ತು. ಬಳಕೆದಾರರಿಗೆ ಇಷ್ಟವಾದ ಅಥವಾ ತಮ್ಮ ಸಂಗ್ರಹದಲ್ಲಿನ ಫೋಟೊಗಳನ್ನು ಲೈವ್ ವಾಲ್‌ಪೇಪರ್‌ಗೆ ಸೇರಿಸಲು ಆಗುತ್ತಿರಲಿಲ್ಲ. ಈ ಬಗ್ಗೆ ಗಮನಹರಿಸಿದ್ದ ಗೂಗಲ್, ತನ್ನ ಗೂಗಲ್ ಫೋಟೊಸ್ ಆ್ಯಪ್‌ನಲ್ಲಿನ ಫೋಟೊಗಳನ್ನು ಇನ್ನುಮುಂದೆ ಲೈವ್ ವಾಲ್‌ಪೇಪರ್‌ನಂತೆ ಬಳಸುವ ಅವಕಾಶವನ್ನು ಈಚೆಗೆ ಕಲ್ಪಿಸಿದೆ.

ಸದ್ಯ ಗೂಗಲ್ ಫೋಟೊಸ್‌ನಲ್ಲಿನ ಇಮೇಜ್‌ಗಳನ್ನು 'ಗೂಗಲ್ ನೆಸ್ಟ್ ಹಬ್' ಸೇರಿದಂತೆ ಕೆಲ ಸ್ಮಾರ್ಟ್ ಡಿವೈಸ್‌ಗಳಲ್ಲಿ ವೈಯಕ್ತಿಕಗೊಳಿಸಿದ ಸ್ಕ್ರೀನ್ ಸೇವರ್‌ಗಳಾಗಿ ಅಥವಾ ಚಿತ್ರ ಏರಿಳಿಕೆಗಳಾಗಿ ಬಳಸಬಹುದಾಗಿತ್ತು. ಈಗ, ನೀವು ಆ ಫೋಟೊಗಳನ್ನು ನಿಮ್ಮ ಆ್ಯಂಡ್ರಾಯ್ಡ್ ಆಪರೇಟಿಂಗ್ ಸಿಸ್ಟಂ ಚಾಲಿತ ಸ್ಮಾರ್ಟ್‌ಫೋನ್‌ನ ಹೋಮ್ ಸ್ಕ್ರೀನ್‌ನಲ್ಲಿ ಲೈವ್ ವಾಲ್‌ಪೇಪರ್‌ನಂತೆ ಬಳಸಬಹುದು. ಅದಕ್ಕೆ ಬಳಕೆದಾರರು ಗೂಗಲ್ ಫೋಟೊಸ್ ಆ್ಯಪ್ ಅನ್ನು ಅಪ್‌ಡೇಟ್ (5.22 ವರ್ಶನ್) ಮಾಡಿಕೊಳ್ಳಬೇಕು.

ಈ ಆ್ಯಪ್‌ನ ಇತ್ತೀಚಿನ ಅಪ್‌ಡೇಟ್‌ನಿಂದಾಗಿ ಸ್ವಯಂಚಾಲಿತವಾಗಿ ನವೀಕರಣಗೊಳ್ಳುವ ಲೈವ್ ವಾಲ್‌ಪೇಪರ್ ಕ್ರಿಯೆಟ್ ಮಾಡಲು ಸ್ಟೋರೇಜ್‌ನ 'ಮೆಮೊರೀಸ್' ವಿಭಾಗದಿಂದ ಲೈವ್ ವಾಲ್‌ಪೇಪರ್‌ಗಳನ್ನು ಹೊಂದಿಸಲು ಸಹಕರಿಸುತ್ತದೆ.

## ಆಯ್ಕೆ ಹೇಗೆ?

ತಮ್ಮ 'ಗೂಗಲ್ ಫೋಟೊಸ್' ಸಂಗ್ರಹದಲ್ಲಿನ ಫೋಟೊಗಳನ್ನು ಲೈವ್ ವಾಲ್‌ಪೇಪರ್ ಆಗಿ ಸೆಟ್ ಮಾಡಲು ಬಳಕೆದಾರರು ಮೊದಲು ಹೋಮ್ ಸ್ಕ್ರೀನ್‌ನ ಮೇಲಿನ ಯಾವುದೇ ಖಾಲಿ ಜಾಗದಲ್ಲಿ ಲಾಂಗ್ ಪ್ರೆಸ್ ಮಾಡಬೇಕು. ಹಾಗೇ ಮಾಡಿದರೆ ಫೋನ್‌ನ 'ಹೋಮ್ ಸೆಟ್ಟಿಂಗ್ಸ್' ಆಯ್ಕೆ ತೆರೆದುಕೊಳ್ಳುತ್ತದೆ. ಅದರಲ್ಲಿ 'ವಿಜೆಟ್ಸ್' ಮತ್ತು 'ಸ್ಟೈಲ್ಸ್ ಆ್ಯಂಡ್ ವಾಲ್‌ಪೇಪರ್ಸ್' ಎಂಬ ವಿವಿಧ ಆಯ್ಕೆಗಳು ಕಾಣುತ್ತವೆ. ಅವುಗಳ ಪೈಕಿ 'ಸ್ಟೈಲ್ಸ್ ಮತ್ತು ವಾಲ್‌ಪೇಪರ್‌ಗಳು' ಆಯ್ಕೆಯ ಮೇಲೆ ಕ್ಲಿಕ್ ಮಾಡಿ ಮತ್ತು ಲೈವ್ ವಾಲ್‌ಪೇಪರ್‌ಗಳಿಗೆ ಸ್ಕ್ರಾಲ್ ಮಾಡಿ. ನಂತರ ಗೂಗಲ್ ಫೋಟೋಸ್‌ನಿಂದ ಇಮೇಜ್‌ಗಳನ್ನು ಲೈವ್ ವಾಲ್‌ಪೇಪರ್‌ನಂತೆ ಹೊಂದಿಸಲು 'ಮೆಮೊರೀಸ್' ಆಯ್ಕೆಯ ಮೇಲೆ ಕ್ಲಿಕ್ಕಿಸಿ ಆನ್ ಮಾಡಿ. ಇದು ಪ್ರತಿದಿನವೂ ತಾನಾಗಿಯೇ ಅಪ್‌ಡೇಟ್ ಆಗುತ್ತಲೇ ಇರುತ್ತದೆ. ಆದಾಗ್ಯೂ, ಈ ಆಯ್ಕೆಯನ್ನು ಕಸ್ಟಮೈಸ್ ಮಾಡಲು ಯಾವುದೇ ಮಾರ್ಗವಿಲ್ಲ ಎಂಬುದನ್ನು ತಿಳಿಯಲೇಬೇಕು.

ಮೆಷಿನ್ ಲರ್ನಿಂಗ್ ಆಧಾರದ ಮೇಲೆ ಗೂಗಲ್ ಫೋಟೋಸ್ ಸಂಗ್ರಹದಲ್ಲಿನ ಫೋಟೊಗಳನ್ನು ಪುಲ್ ಮಾಡಿ ಅವುಗಳನ್ನು ಲೈವ್ ವಾಲ್‌ಪೇಪರ್ ಆಗಿ ರೂಪಿಸುತ್ತದೆ. ಆದ್ದರಿಂದ, ಮುಜುಗರದ ಅಥವಾ ಕೆಟ್ಟದಾದ ಫೋಟೋಗಳನ್ನು ಡಿಲಿಟ್ ಮಾಡಿ. ಇಲ್ಲವಾದರೆ, ಮುಜುಗರ ತರಬಲ್ಲ ಫೋಟೊಗಳೂ ಲೈವ್ ವಾಲ್‌ಪೇಪರ್ ಆಗಿ ಕಾಣಿಸಿಕೊಳ್ಳುತ್ತವೆ. ■

### ಫೇಸ್‌ಬುಕ್‌ಗೆ ಹೆಚ್ಚುವರಿ ಭದ್ರತೆ!

ಬಳಕೆದಾರರ ಹಿತದೃಷ್ಟಿಯಿಂದ ಮುಂದಿನ ವರ್ಷದಿಂದ ಫೇಸ್‌ಬುಕ್ ಮತ್ತಷ್ಟು ಭದ್ರತಾ ವಿಶೇಷಗಳನ್ನು ಪರಿಚಯಿಸಲಿದೆ. ಈಗಾಗಲೇ ಒದಗಿಸಿರುವ ಭದ್ರತಾ ಫೀಚರ್‌ಗಳ ಕುರಿತು ಬಳಕೆದಾರರು ಸಾಕಷ್ಟು ಅಸಮಾಧಾನ ಹೊಂದಿದ್ದು, ಇದರಿಂದ ಎಚ್ಚೆತ್ತುಕೊಂಡಿರುವ ಫೇಸ್‌ಬುಕ್ ಹೊಸ ಭದ್ರತಾ ಫೀಚರ್‌ಗಳನ್ನು ಒದಗಿಸುವುದಾಗಿ ತಿಳಿಸಿದೆ.

ಫೇಸ್ ರೆಕಗ್ನಿಷನ್ ಮತ್ತು ಐರಿಸ್ ಸ್ಕ್ಯಾನ್, ಫಿಂಗರ್‌ಪ್ರಿಂಟ್ ಲಾಕ್‌ನಂತಹ ಫೀಚರ್‌ಗಳನ್ನು ಫೇಸ್‌ಬುಕ್ ತನ್ನ ಬಳಕೆದಾರರಿಗೆ ಒದಗಿಸಲಿದೆ. ಮೊಬೈಲ್ ಅಪ್ಲಿಕೇಷನ್‌ನಲ್ಲಿ ಫೇಸ್‌ಬುಕ್‌ಗೆ ಲಾಗಿನ್ ಆಗುವ ಮೊದಲು ಭದ್ರತಾ ಫೀಚರ್ ಬಳಸುವುದು ಕಡ್ಡಾಯವಾಗಲಿದೆ.

ಸಾಮಾಜಿಕ ತಾಣಗಳ ದುರ್ಬಳಕೆ ಮತ್ತು ಹ್ಯಾಕಿಂಗ್ ಪ್ರಕರಣ ಹೆಚ್ಚುತ್ತಿರುವುದರಿಂದ, ಬಳಕೆದಾರರಿಗೆ ಹೆಚ್ಚಿನ ಸುರಕ್ಷತೆ ಒದಗಿಸುವ ಸಲುವಾಗಿ 'ಫೇಸ್‌ಬುಕ್ ಪ್ರೊಟೆಕ್ಟ್' ಅಡಿಯಲ್ಲಿ ಹೆಚ್ಚುವರಿ ಭದ್ರತಾ ಫೀಚರ್‌ಗಳನ್ನು ಒದಗಿಸಲಿದೆ. ಆರಂಭದಲ್ಲಿ ಅಮೆರಿಕದಲ್ಲಿ ಈ ಆಯ್ಕೆ ಬಳಕೆದಾರರಿಗೆ ಲಭ್ಯವಾಗಲಿದ್ದು, ನಂತರದಲ್ಲಿ ಇತರ ಪ್ರದೇಶಗಳಲ್ಲೂ ಅಪ್‌ಡೇಟ್ ಮೂಲಕ ಲಭ್ಯವಾಗಲಿದೆ. ■

